# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

# ಮಾಹಿತಿ ಹಕ್ಕು ಕಾಯ್ದೆ – 2005
# ಮಾಹಿತಿ ಹಕ್ಕು ಅಧಿನಿಯಮ 4(1) ಬಿ ವಿವರ

ಪಶ್ಚಿಮ ಘಟ್ಟಗಳ ಮತ್ತು ಕರ್ನಾಟಕ ಕರಾವಳಿಯ ಜೀವ ವೈವಿಧ್ಯತೆ, ಪರಂಪರೆ ಮತ್ತು ಸಂಸ್ಕೃತಿಯ ಸಂರಕ್ಷಣೆಗಾಗಿ ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕಲಿಕೆಗಾಗಿ ಉತ್ತೇಜಕ ಪರಿಸರವನ್ನು ಸೃಷ್ಟಿಸಲು ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಮತ್ತು ಗಣಿತ ಆಧಾರಿತ ಅಭಿವೃದ್ಧಿಗಳ ಬಗ್ಗೆ ಸಾಮಾನ್ಯ ಜನರಲ್ಲಿ ಅರಿವುಂಟು ಮಾಡಲು ಜೊತೆಗೆ ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗಾಗಿ ಮಂಗಳೂರಿನ ಪಿಲಿಕುಳ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವುದಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಪ್ರಾಸಂಗಿಕ ವಿಷಯಗಳಿಗಾಗಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ನ್ನು ಸರಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ08 ಶಾಸನ 2018 ದಿ: 09–03–2018 ರಂತೆ ಹೊರಡಿಸಿ ವಿಶೇಷ ರಾಜ್ಯಪತ್ರದಲ್ಲಿ ಅದೇ ದಿನಾಂಕದಂದು ಪ್ರಕಟಿಸಿದೆ.

1) ಅದರ ಅಧಿಕಾರಿಗಳ ಕರ್ತವ್ಯ ಕರ್ತವ್ಯಗಳಲ್ಲಿ ಈ ಕಾಯಿದೆಯ ಕಲಂ 14 ಮತ್ತು 15 ರಂತೆ ನಿಯತಗೊಳಿಸಲಾಗಿದೆ.
2) ಈ ಕಾಯಿದೆಯ ಕಲಂ 3(4) ರಂತೆ ದ.ಕ. ಜಿಲ್ಲಾಧಿಕಾರಿಯವರು ಚೇರ್‌ಮೆನ್‌ರವರಾಗಿರುವ 25 ಸದಸ್ಯರಿರುವ ಪ್ರಾಧಿಕಾರ ಸಮಿತಿಯನ್ನು, ಹಾಗೆಯೇ ಕಲಂ 9 ರಂತೆ ಕರ್ನಾಟಕ ಸರಕಾರದ ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಅಧ್ಯಕ್ಷರಾಗಿರುವ ಮಾನ್ಯದ. ಕ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಾನ್ಯ ಪ್ರವಾಸೋದ್ಯಮ ಸಚಿವರು ಸಹ ಅಧ್ಯಕ್ಷರಾಗಿರುವ ಹಾಗೂ ಇತರೆ ಸದಸ್ಯರನ್ನು ಒಳಗೊಂಡ 30 ಸದಸ್ಯರ ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸಲಾಗಿದೆ. ಈ ಕಾಯಿದೆಯಲ್ಲಿ ಪ್ರಸಿದ್ಧಪಡಿಸಿದಂತೆ ನಿಗಧಿತ ಅಧಿಕಾರವನ್ನು ಕೂಡಾ ವಿವರಿಸಲಾಗಿದೆ.
3) ಪ್ರಾಧಿಕಾರದ ಕಾರ್ಯನಿರ್ವಹಣೆಯನ್ನು ಕಾಯಿದೆಯಡಿ ಪ್ರಸಿದ್ದಪಡಿಸಿದಂತೆ ನಿರ್ವಹಿಸಿಕೊಂಡು ಬರಲಾಗುತ್ತದೆ.
4) ಪ್ರಾಧಿಕಾರದ ಕರ್ತವ್ಯಗಳನ್ನು ಸರಕಾರದ ನಿಯಮದಡಿ ನಿರ್ವಹಿಸಿಕೊಂಡು ಬರಲಾಗುತ್ತಿದೆ.
5) ಅದು ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಕಡತಗಳ ವಿವರಣೆಯನ್ನು ಈ ಪ್ರಕಟಣೆಯ ಮೂಲಕ ಪ್ರಚುರಪಡಿಸಿದೆ.
6) ಅದರ ಕಾರ್ಯನೀತಿಯ ರಚನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳ ವಿವರಣೆಯನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕಾಯಿದೆಯ ಕಲಂ 4 ಮತ್ತು 20 ರಲ್ಲಿ ವಿವರಿಸಲಾಗಿದೆ.
7) ಹೊಸದಾಗಿ ರಚಿತವಾದ ಪ್ರಾಧಿಕಾರವಾಗಿರುವುದರಿಂದ ಹಂತಹಂತವಾಗಿ ಕಾರ್ಯಚಟುವಟಿಕೆಗಳನ್ನು ಪ್ರಕಟಿಸಲಾಗುವುದು.

8) ಆಯುಕ್ತರು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತಾಧಿಕಾರಿಯಾಗಿರುತ್ತಾರೆ. ಲೆಕ್ಕಪತ್ರಗಳ ಅಧಿಕಾರಿಯು ಆಯುಕ್ತರಿಗೆ ವರದಿ ಮಾಡಬೇಕಾಗಿದ್ದು ಮತ್ತು ನಿಯಮಿಸಬಹುದಾದ ಅಂಥಹ ಅಧಿಕಾರಗಳನ್ನು ಚಲಾಯಿಸಿ ನಿರ್ವಹಿಸುತ್ತಾರೆ.

9) ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿಗೆ ನಿಯಮಿಸಿದಂತೆ ವೇತನ ಬಟವಾಡೆ ಮಾಡಲಾಗುತ್ತಿದೆ.

10) ಆಯವ್ಯಯ ಅಂದಾಜು ಪಟ್ಟಿಯಲ್ಲಿ ನಿಗಧಿಪಡಿಸಿದಂತೆ ಪ್ರಾಧಿಕಾರದ ವೆಚ್ಚವನ್ನು ಭರಿಸಲಾಗುವುದು.

11) ಪ್ರಾಧಿಕಾರದ ವಿವಿಧ ಆಕರ್ಷಣೆಗಳಿಗೆ ನಿಗಧಿಪಡಿಸಿರುವ ಪ್ರವೇಶ ಶುಲ್ಕ ಹಾಗೂ ಚಿತ್ರೀಕರಣ ನಡೆಸಲು ನಿಗಧಿಪಡಿಸಿದ ಶುಲ್ಕಗಳ ವಿವರಗಳನ್ನು, ರಿಯಾಯಿತಿಯ ವಿವರಗಳನ್ನು ಜಾಲತಾಣದಲ್ಲಿ ಪ್ರಕಟಿಸಿದೆ.

12) ಪ್ರಾಧಿಕಾರ ಹೊಂದಿರುವ ವಿದ್ಯುನ್ಮಾನ ರೂಪದ ಮಾಹಿತಿಯು ಜಾಲತಾಣದಲ್ಲಿ ಲಭ್ಯವಿದೆ.

13) ಸಾರ್ವಜನಿಕರ ಉಪಯೋಗಕ್ಕೆ ಗ್ರಂಥಾಲಯವಿರುವುದಿಲ್ಲ.

14) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು ಪದನಾಮದ ವಿವರಗಳನ್ನು ಜಾಲತಾಣದಲ್ಲಿ ನೀಡಿದೆ.

ಆಯುಕ್ತರು